# ಕಣ್ಣೆಂಬ ಕಾವ್ಯ

ಪಂಚೇಂದ್ರಿಯಗಳಲ್ಲಿ ನಯನವೇ ಪ್ರಧಾನವಾದುದು ಎಂಬ ಹೇಳಿಕೆಯೊಂದು ಸಂಸ್ಕೃತದಲ್ಲಿದೆ. ಇದರಲ್ಲಿ ಉತ್ಪ್ರೇಕ್ಷೆಯಿಲ್ಲ. ಹೊರ ಜಗತ್ತು ನಮ್ಮ ಮುಂದೆ ಮೂರ್ತಗೊಳ್ಳುವುದು ಕಣ್ಣುಗಳ ಸಹಾಯದಿಂದ ಎಂಬುದು ಎಲ್ಲರ ಅನುಭವ. ಎತ್ತರ, ಆಳ, ಅಗಲ, ಸಮೀಪ, ದೂರ, ಆಕಾರ, ಬಣ್ಣ– ಹೀಗೆ ವಸ್ತು ಪ್ರಪಂಚದ ಬಾಹ್ಯ ವಿವರಗಳನ್ನು ಕಣ್ಣುಗಳು ನಮ್ಮ ಅರಿವಿಗೆ ತರುತ್ತವೆ. ಬೆಳಕು, ಕತ್ತಲೆ, ಸುಂದರ, ವಿಕಾರ– ಇಂಥ ಪ್ರಾಕೃತಿಕ ಸ್ಥಿತಿಗಳನ್ನು ನಾವು ಗ್ರಹಿಸುವುದು ಕಣ್ಣುಗಳಿಂದಲೇ. ಆದ್ದರಿಂದಲೇ ಕವಿ ಗಂಗಾಧರ ಚಿತ್ತಾಲರು 'ಸೃಷ್ಟಿ ಗೋಲಿನ ನಳೆಯೆ ಕಣ್ಣಗೋಲವೆ ಬೇಕು' ಎಂದಿರುವುದು.



ಆದರೆ 'ದರ್ಶನ' ಅರ್ಥಾತ್ ನೋಡುವಿಕೆಗೆ ಕಣ್ಣು ಬೇಕಾಗಿರುವಂತೆ, 'ಪ್ರದರ್ಶನ' ಅರ್ಥಾತ್ ತೋರುವಿಕೆಗೂ ಕಣ್ಣು ಅಗತ್ಯ. ಇಲ್ಲಿ 'ಪ್ರದರ್ಶನ' ಎಂದರೆ ವ್ಯಕ್ತಿಯ ಅಂತರಂಗದ ಭಾವನೆಗಳ ಹೊರಹೊಮ್ಮುವಿಕೆ ಎಂದರ್ಥ. ಕಣ್ಣುಗಳು ಮನುಷ್ಯನ ಅಂತರಂಗದ ಕಿಟಕಿಗಳು. ಒಳಗೆ ಅದುಮಿಟ್ಟ ದುಃಖ, ದುಮ್ಮಾನ, ಭಯ, ವಿಹ್ವಲತೆ, ಚಿಂತೆ, ಕೋಪ, ಸಂಕಟ, ಉದ್ವೇಗ, ಕಾತರ ಮುಂತಾದ ವೇದನಾಪೂರ್ಣ ಭಾವಗಳಿರಬಹುದು; ಸಂತೋಷ, ಸಂಭ್ರಮ, ಉತ್ಸಾಹ, ಕರುಣೆ, ಪ್ರೀತಿ, ವಾತ್ಸಲ್ಯ, ಸ್ನೇಹ, ಸಮಾಧಾನ, ಸಂತೃಪ್ತಿ– ಇಂಥ ಚೈತನ್ಯಪೂರ್ಣ ಭಾವಗಳಿರಬಹುದು. ಈ ಎಲ್ಲವೂ ಮೊದಲು ಅನಾವರಣಗೊಳ್ಳುವುದು ಕಣ್ಣುಗಳಲ್ಲಿಯೇ, ಶೃಂಗಾರ, ವೀರ– ಇತ್ಯಾದಿ ನವರಸಗಳು ಪ್ರಕಟವಾಗುವುದೂ ಕಣ್ಣುಗಳ ಮೂಲಕವೇ. ಕಣ್ಣುಗಳಲ್ಲಿ ವ್ಯಕ್ತಿಯ ಸ್ವಭಾವ ಆತನ ಅರಿವಿಲ್ಲದೇ ಇಣುಕುತ್ತದೆ. ಮನುಷ್ಯನ ಮನಸ್ಸಿನ ವಿಕಾರಗಳು ಆತನ ಮಾತು ಮತ್ತು ಕೃತಿಗಳಿಗಿಂತ ಮೊದಲು ಕಾಣಿಸಿಕೊಳ್ಳುವುದು ಆತನ ಕಣ್ಣುಗಳಲ್ಲಿ. ಮಾತು ಎಂಬುದು ಪ್ರಜ್ಞಾಪೂರ್ವಕವಾಗಿ ರೂಪುಗೊಳ್ಳುವ ಕ್ರಿಯೆ. ಆಲೋಚನೆ, ಅನ್ನಿಸಿಕೆಗಳು ಭಾಷಾ ಶರೀರವನ್ನು ಧರಿಸಿ, ಹೊರ ಬರಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಆದರೆ ಗುಡುಗಿನ ಸದ್ದು ಕಿವಿಗೆ ಬೀಳುವ ಮೊದಲೇ ಮಿಂಚು ಕಾಣಿಸಿಕೊಳ್ಳುವಂತೆ– ಮಾತಿಗಿಂತ ಮೊದಲೇ ಕಣ್ಣುಗಳಲ್ಲಿ ಭಾವ ಅಭಿವ್ಯಕ್ತಗೊಳ್ಳುತ್ತದೆ. ಭಗವಾನ್ ರಮಣರು ತಮ್ಮ ಕಣ್ಣುಗಳ ಮೂಲಕವೇ ಜಿಜ್ಞಾಸುಗಳೊಂದಿಗೆ, ಶ್ರದ್ಧಾಳುಗಳೊಂದಿಗೆ ಸಂಭಾಷಣೆ ಮಾಡಿ, ಅವರ ಸಂದೇಹಗಳನ್ನು ನಿವಾರಿಸುತ್ತಿದ್ದರಂತೆ. ಸ್ವಾಮಿ ವಿವೇಕಾನಂದರು ತಮ್ಮ ಕಣ್ಣುಗಳ ತೇಜಸ್ಸಿನಿಂದಲೇ ಸುತ್ತಲಿರುವವರನ್ನು ಪರವಶಗೊಳಿಸುತ್ತಿದ್ದರು. ಮಗುವಿನ ನಿರ್ಮಲ ಕಣ್ಣುಗಳಲ್ಲಿ ಹೊಳೆಯುವ ಶುಚಿ–ಶುಭ್ರ ಚೆಲುವು ಯಾರನ್ನು ಸೆಳೆಯುವುದಿಲ್ಲ? ವಾತ್ಸಲ್ಯ, ಕರುಣೆ– ಇತ್ಯಾದಿ ಮೃದು ಭಾವಗಳು ತೊಟ್ಟಿಕ್ಕುವ ಕಣ್ಣುಗಳಿರುವಂತೆ, ಕಿಡಿ ಕಾರುವ ಕಣ್ಣುಗಳೂ ಇವೆ; ಸ್ನೇಹ ಪ್ರೀತಿಗಳನ್ನು ಚಿಮ್ಮಿಸುವ ಕಣ್ಣುಗಳಿರುವಂತೆ, ವ್ಯಗ್ರವೂ ಉಗ್ರವೂ ಆಗಿರುವ ವ್ಯಾಘ್ರ ನಯನಗಳೂ ಇವೆ. 'A beautiful eye makes silence eloquent' ಎಂಬ ಹೇಳಿಕೆಯನ್ನು ಸಮರ್ಥಿಸುವ ಭಾವದೀಪ್ತ ನಯನಗಳೂ ಇವೆ.

ಇಷ್ಟೆಲ್ಲ ಹೇಳಿದರೂ ಕಣ್ಣುಗಳಿಗೆ ಹಲವು ಮಿತಿಗಳಿರುವುದನ್ನು ಮರೆಯುವಂತಿಲ್ಲ. ಬುದ್ಧಿ ಅಥವಾ ಮನಸ್ಸು ಆಯ್ಕೆ ಮಾಡಿದುದನ್ನು ಮಾತ್ರ ಕಣ್ಣುಗಳು– ನಿಜವಾದ ಅರ್ಥದಲ್ಲಿ– 'ಕಾಣು'ತ್ತವೆ. ಬುದ್ಧಿ ನಿರಾಕರಿಸಿದರೆ, ಮನಸ್ಸು ಬೇಡವೆಂದರೆ, ಕಣ್ಣುಗಳು ತೆರೆದುಕೊಂಡಿದ್ದರೂ ಮನುಷ್ಯನಿಗೆ ದೃಶ್ಯಾನುಭವವಾಗುವುದಿಲ್ಲ. ಆದ್ದರಿಂದಲೇ ಕನಕದಾಸರು– '...ನಯನ ಬುದ್ಧಿಯ ಒಳಗೋ, ಬುದ್ಧಿ ನಯನದ ಒಳಗೋ, ನಯನ ಬುದ್ಧಿಗಳೆರಡು ನಿನ್ನೊಳಗೋ...?' ಎಂದು ಭಗವಂತನನ್ನು ಪ್ರಶ್ನಿಸಿದ್ದು. ನಮ್ಮ ದೃಷ್ಟಿ ಶಕ್ತಿಯ ವ್ಯಾಪ್ತಿಯೂ ಸೀಮಿತವಾದುದು. ಈ ಕಾರಣದಿಂದಲೇ ಸರ್ವಸಾಕ್ಷಿಯಾಗಿರುವ ಭಗವಂತನನ್ನು ನಮ್ಮವರು ವಿಶ್ವತಃಶ್ಚಕ್ಷು, ಸಹಸ್ರಾಕ್ಷ– ಇತ್ಯಾದಿ ರೂಪಗಳಲ್ಲಿ ಪರಿಭಾವಿಸಿರುವುದು, ನಮ್ಮ ಅಂತರಾಳದ ಕಸ ಕೊಳೆಗಳನ್ನು ಪತ್ತೆಹಚ್ಚಲು ಬಾಹ್ಯೇಂದ್ರಿಯವಾದ ಕಣ್ಣುಗಳಿಗೆ ಸಾಧ್ಯವಿಲ್ಲ. ಆ ಕೆಲಸ ಮಾಡಲು ಹೊರಗಣ್ಣು ಮುಚ್ಚಿ, ಒಳಗಣ್ಣು ತೆರೆಯ ಬೇಕಾಗುತ್ತದೆ.

ಮನುಷ್ಯನೂ ಸೇರಿದಂತೆ ಎಲ್ಲ ಜೀವಿಗಳೂ ಮೊದಲ ಬಾರಿ ಕಣ್ತೆರೆದಾಗ ಬದುಕು ಪ್ರಾರಂಭವಾಗುತ್ತದೆ; ಕೊನೆಯ ಬಾರಿ ಕಣ್ಣು ಮುಚ್ಚಿದಾಗ ಬದುಕು ಮುಕ್ತಾಯವಾಗುತ್ತದೆ.

■ ವೈನತೇಯ

---

## ಮಾತೇ ಮುತ್ತು

★ ಕೋಪದಿಂದ ವಿವೇಕ ಕೆಡುವುದು, ಅದರಿಂದ ಸ್ಮೃತಿ ತಪ್ಪುವುದು, ಸ್ಮೃತಿ ತಪ್ಪುವುದರಿಂದ ಬುದ್ಧಿ ಕೆಡುವುದು, ಬುದ್ಧಿ ಕೆಡುವುದರಿಂದ ಸರ್ವ ನಾಶವಾಗುವುದು.

-ಭಗವದ್ಗೀತೆ

★ ಮುನಿದವರು ಮಡಿದವರಿಗೆ ಸಮಾನರು; ಮುನಿಸ ತೊರೆದವರು ಮುನಿಗಳಿಗೆ ಸಮಾನರು.

-ತಿರುವಳ್ಳುವರ್

★ ನಾನೂ ಅದೇ ಹೇಳ್ತಿರತೇನಿ– ಸಿಟ್ಟಿಗೆದ್ದವರೆಲ್ಲ, ಸಿಟ್ಟು ಗೆದ್ದವರಾಗಬೇಕು ಅಂತ.

-ದ.ರಾ.ಬೇಂದ್ರೆ

★ ಕ್ರಾಂತಿ ಎಂದರೇನು ಗೊತ್ತೆ? ಅದು ಪ್ರಗತಿ; ಪ್ರಗತಿ ಎಂದರೇನು ಗೊತ್ತೆ? ಅದು ನಾಳೆ.

-ವಿಕ್ಟರ್ ಹ್ಯೂಗೋ

★ ಕೆಳಗಿರುವವರು ಸರಿ ಸಮರಾಗೋಣ ಎಂದು, ಸರಿ ಸಮಾನವಾಗಿರುವವರು ಮತ್ತಷ್ಟು ಮೇಲೇರೋಣ ಎಂದು ಕ್ರಾಂತಿ ಮಾಡುತ್ತಾರೆ!

-ಅರಿಸ್ಟಾಟಲ್

★ ರಾಜರು ನೀತಿ ಎಂದು ಸರ್ವಾಧಿಕಾರಿಗಳಾದರೆ, ಪ್ರಜೆಗಳು ತತ್ವ ಎಂದು ಕ್ರಾಂತಿ ಮಾಡುತ್ತಾರೆ.

-ಎಡ್ಮಂಡ್ ಬರ್ಕ್

★ ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು ಬಿಜ್ಜಳನ ಭಂಡಾರವೇನಗೇಕಯ್ಯಾ?

-ಬಸವಣ್ಣ

★ ಬಿಜ್ಜಳನದು ಅರಸೊತ್ತಿಗೆಯಾದರೆ ನನ್ನದು ಅವನಿಗಿಂತ ಮಿಗಿಲಾದ ಅರಸೊತ್ತಿಗೆ.

-ಮಡಿವಾಳ ಮಾಚಿದೇವ

★ ಮಾದಾರ ಚೆನ್ನಯ್ಯನ ಮನೆಯಲ್ಲಿ ಕೂಡಲ ಸಂಗಮದೇವ ಅಂಬಲಿಯನುಂಡ ಕಾರಣದಿಂದಾಗಿ ವೇದ ಗಡಗಡನೆ ನಡುಗಿತ್ತು.

-ಎಸ್.ಜಿ.ಸಿದ್ಧರಾಮಯ್ಯ

★ ಹಾಸ್ಯ ವಿಕಟತನವಲ್ಲ. ಕೇವಲ ಕುಚೋದ್ಯಕ್ಕಾಗಿ ಪರಿಣಾಮದ ಕಡೆ ಲಕ್ಷ್ಯಕೊಡದೆ ಮಾಡುವ ಹಾಸ್ಯ ಕೆಲವು ವೇಳೆ ಅನರ್ಥಕಾರಿ.

-ಕೈಲಾಸಂ

★ ತಂದೆ ತನ್ನ ಮಗಳ ಜತೆ ಚಿನ್ನದ ದಾರದ ಎಳೆ ಹೆಣೆದಿರುತ್ತಾನೆ. ಕಾಲ ಕಳೆದಂತೆ ಆ ಎಳೆ ಎಷ್ಟು ಉದ್ದವಾಗುತ್ತದೆ ಎಂದರೆ ನೀವು ಅದರಿಂದ ಪ್ರೀತಿ ಎಂಬ ಬಟ್ಟೆಯನ್ನೇ ನೇಯಬಹುದು.

ಜಾನ್ ಗ್ರೆಗೊರಿ ಬ್ರೌನ್

★ ಸರಿಯಾದ ರೀತಿಯಲ್ಲಿ ಉಪಯೋಗಿಸದಿದ್ದರೆ ಒಳ್ಳೆಯ ಗುಣವೇ ಕೆಲವು ಬಾರಿ ಕೆಟ್ಟದ್ದಾಗುತ್ತದೆ.

-ಶೇಕ್ಸ್‌ಪಿಯರ್

★ ಪ್ರತಿಯೊಂದು ಗುಂಪೂ ತಾನು ಆಚರಿಸಲು ಸಾಧ್ಯವಾಗದ ಸದ್ಗುಣಗಳ ಮಹತ್ವವನ್ನು ಸಾರುತ್ತದೆ; ಶ್ರೀಮಂತರು ಮಿತವ್ಯಯದ ಗುಣವನ್ನು, ಸೋಮಾರಿಗಳು ಕೆಲಸದ ಘನತೆಯನ್ನು.

-ಆಸ್ಕರ್ ವೈಲ್ಡ್

★ ವಿವೇಕಿಗಳು ಗಾದೆಗಳನ್ನು ಸೃಷ್ಟಿಸುತ್ತಾರೆ; ಅವಿವೇಕಿಗಳು ಅವನ್ನು ಪುನರುಚ್ಚರಿಸುತ್ತಾರೆ.

-ಐಸಾಕ್ ಡಿಸ್‌ರೇಲಿ